## ಏನು ಮಾಡಬೇಕು?

### ✔ಓದಲು ನಿರ್ದಿಷ್ಟ ಜಾಗ ಮಾಡಿ.

ರೂಮಿನ ಮೂಲೆಯಲ್ಲಿ, ಚೆನ್ನಾಗಿ ಬೆಳಕು ಗಾಳಿ ಇರುವ ಜಾಗದಲ್ಲಿ ಕುರ್ಚಿ, ಟೇಬಲ್ ಮತ್ತು ಒಂದಷ್ಟು ಪುಸ್ತಕಗಳನ್ನು ಸುಲಭವಾಗಿ ಕೈಗೆ ಸಿಗುವ ಹಾಗೆ ಇಟ್ಟರಾಯಿತು. ಪದೇ ಪದೇ ತಿರುಗಾಡುವಾಗ ಪುಸ್ತಕ ಕಣ್ಣಿಗೆ ಬಿದ್ದು ಕುತೂಹಲಕ್ಕಾದರೂ ಓದೋಣ ಅನಿಸುತ್ತದೆ.

### ✔ದಿನವೂ ಓದುವುದು.

ದಿನವೂ ಹಲ್ಲುಜ್ಜಲು, ಮುಖ ತೊಳೆಯಲು ,ಊಟ ಮಾಡಲು ಹೇಗೆ ಮಕ್ಕಳಿಗೆ ಕಲಿಸುತ್ತೇವೋ ಹಾಗೆಯೇ ಓದುವುದನ್ನು ಕಲಿಸಬೇಕು. ನಿರ್ದಿಷ್ಟ ಸಮಯ ಒಳ್ಳೆಯದಾದರೂ ಅನುಕೂಲಕ್ಕೆ ತಕ್ಕಂತೆ ಓದುವುದು ದಿನಚರಿಯ ಭಾಗವಾಗಬೇಕು. ದಿನಕ್ಕೆ ಹತ್ತು ನಿಮಿಷದಿಂದ ಆರಂಭಿಸಿ ಒಂದು ಗಂಟೆಯವರೆಗೆ ಸಮಯವನ್ನು ಓದಲು ಮೀಸಲಿಡಬಹುದು.

### ✔ಆಸಕ್ತಿದಾಯಕ ಪುಸ್ತಕಗಳು

ಮಕ್ಕಳ ಗಮನ ಸೆಳೆಯುವ, ಅವರಿಗೆ ಆಕರ್ಷಕ ಎನ್ನಿಸುವ ಪುಸ್ತಕಗಳನ್ನು ಆರಿಸುವುದು ಅಗತ್ಯ. ಸೂಕ್ತವಲ್ಲದ ಪುಸ್ತಕ ಕೊಟ್ಟಾಗ ಮಕ್ಕಳು ಓದುವುದನ್ನೇ ನಿಲ್ಲಿಸುತ್ತಾರೆ. ವಯಸ್ಸಿಗೆ ತಕ್ಕಂತೆ ಪುಸ್ತಕಗಳ ಆಯ್ಕೆ ಇರಲಿ. ಚಿಕ್ಕ ಮಕ್ಕಳಿಗೆ ದೊಡ್ಡ ಅಕ್ಷರ, ಬಣ್ಣದ ಚಿತ್ರಗಳ ಪುಸ್ತಕ, ಒಂದರಿಂದ ಐದನೇ ತರಗತಿ ಮಕ್ಕಳಿಗೆ ಕತೆ, ಸಂಭಾಷಣೆ, ಜೀವನ ಚರಿತ್ರೆ, ಕಾಮಿಕ್ಸ್ ಸೂಕ್ತ. ಹೈಸ್ಕೂಲಿಗೆ ಬರುವಷ್ಟರಲ್ಲಿ ಮಕ್ಕಳು ತಮ್ಮದೇ ಆದ ಓದುವ ಅಭಿರುಚಿ ಬೆಳೆಸಿಕೊಂಡಿರುತ್ತಾರೆ. ಆದರೂ ಒಳ್ಳೇ ಪುಸ್ತಕಗಳ ಆಗಾಗ್ಗೆ ಸಲಹೆ, ಸೂಚನೆ ನೀಡಬಹುದು.

### ✔ಓದುವ ರೀತಿ

ಓದುವ ಹೊಸತರಲ್ಲಿ ಮಕ್ಕಳೊಡನೆ ಕುಳಿತು ತಾವೂ ಓದಿ ಮಕ್ಕಳಿಗೆ ಓದಿಸಿ ಆನಂದಿಸುವುದನ್ನು ಮಾಡಬೇಕು. ಧ್ವನಿ ಬದಲಿಸಿ, ಸಂಭಾಷಣೆ ರೂಪದಲ್ಲಿ, ಏರಿಳಿತಗಳೊಡನೆ ಓದಿದರೆ ಮಕ್ಕಳಲ್ಲಿ ಕುತೂಹಲ ಮೂಡುತ್ತದೆ.

### ✔ಪುಸ್ತಕಗಳ ಬಗ್ಗೆ ಚರ್ಚೆ

ಓದಲು ಬರದ ಬರೀ ಕತೆ ಕೇಳುವ ಪುಟ್ಟ ಮಕ್ಕಳೂ ಪುಸ್ತಕದ ಬಗ್ಗೆ ಚರ್ಚೆ ನಡೆಸಿದರೆ ಉತ್ಸಾಹದಿಂದ ಪಾಲ್ಗೊಳ್ಳುತ್ತಾರೆ. ಇನ್ನಷ್ಟು ಕೇಳುವ ಬಯಕೆ ವ್ಯಕ್ತಪಡಿಸುತ್ತಾರೆ. ಹಾಗೆಯೇ ಸ್ವತಃ ಓದುವ ಮಕ್ಕಳ ಅಭಿಪ್ರಾಯ ತಿಳಿಯಲು ಮತ್ತು ಹೊಸ ಪುಸ್ತಕ ಪರಿಚಯಿಸಲು ಚರ್ಚೆ ಸಹಾಯಕ.

### ✔ಗ್ರಂಥಾಲಯಕ್ಕೆ ಭೇಟಿ

ಒದೇ ಕಡೆಯಲ್ಲಿ ಸಾವಿರಾರು ಬೇರೆ ಬೇರೆ ಪುಸ್ತಕಗಳನ್ನು ಹೊಂದಿರುವ ಗ್ರಂಥಾಲಯ ಓದನ್ನು ಪ್ರೇರೇಪಿಸುವ ಅತ್ಯುತ್ತಮ ಸ್ಥಳ. ಓದಲೆಂದೇ ಬಂದ ಅನೇಕರನ್ನು ನೋಡಿ ಸ್ಫೂರ್ತಿ ಸಿಕ್ಕರೆ ಹೊಸ ಪುಸ್ತಕಗಳನ್ನು ಹುಡುಕಲು ಖುಷಿ ಎನಿಸುತ್ತದೆ. ಸಮಾನ ಅಭಿರುಚಿಯ ಸ್ನೇಹಿತರನ್ನೂ ಇಲ್ಲಿ ಸಂಪಾದಿಸಬಹುದು.

### ✔ಪುಸ್ತಕ ಉಡುಗೊರೆ

ಮಕ್ಕಳು ಒಳ್ಳೆಯ ನಡತೆ ತೋರಿಸಿದಾಗ, ಏನನ್ನಾದರೂ ಸಾಧಿಸಿದಾಗ, ಹುಟ್ಟುಹಬ್ಬದ ಶುಭ ಸಂದರ್ಭಗಳಲ್ಲಿ ಸಿಹಿ ತಿಂಡಿ, ಬಟ್ಟೆ, ಆಟದ ಸಾಮಾನಿನ ಜತೆ ಪುಸ್ತಕವನ್ನು ಉಡುಗೊರೆಯಾಗಿ ನೀಡಿದರೆ ಒಳ್ಳೆಯದು.

### ✔ಮನೆಯಲ್ಲಿ ಚಿಕ್ಕ ಲೈಬ್ರರಿ

ಮಕ್ಕಳು ಅನುಕರಣಾಶೀಲರು. ತಮ್ಮ ಸುತ್ತ ಮುತ್ತ ಇರುವ ಹಿರಿಯರ ನಡೆ, ನುಡಿ ಅನುಸರಿಸಿ ಕಲಿಯುತ್ತಾರೆ. ಹಾಗಾಗಿ ಪೋಷಕರು ತಾವು ಓದುವ ಅಭ್ಯಾಸವಿಟ್ಟುಕೊಂಡರೆ ಮಕ್ಕಳು ಅದನ್ನು ರೂಢಿಸಿಕೊಳ್ಳುತ್ತಾರೆ. ಕೆಲವೇ ಕೆಲವು ಪುಸ್ತಕಗಳಾದರೂ ಸರಿಯೇ ಮನೆಯಲ್ಲಿ ಚಿಕ್ಕ ಲೈಬ್ರರಿ ಇದ್ದರೆ ಮಕ್ಕಳಿಗೆ ಖಂಡಿತ ಓದುವ ಆಸಕ್ತಿ ತಾನಾಗಿ ಬೆಳೆಯುತ್ತದೆ.

ಶಾಲೆಯಲ್ಲಿ ಕಡ್ಡಾಯವಾಗಿ ಲೈಬ್ರರಿಯ ಬಳಕೆ ಕಡ್ಡಾಯವಾಗಬೇಕು. ಅದಲ್ಲದೇ ವಿದ್ಯಾರ್ಥಿಗಳು ಪರಸ್ಪರ ಪುಸ್ತಕ ವಿನಿಮಯ, ಶಿಕ್ಷಕರ ಜತೆ ಓದಿದ ಪುಸ್ತಕಗಳ ಚರ್ಚೆ ನಡೆಸಬಹುದು.



ಅಜ್ಜ ಅಜ್ಜಿ ಇರುವುದೆಲ್ಲೋ ಗೊತ್ತಿಲ್ಲ. ಆಧುನಿಕ ಸ್ಪರ್ಧಾತ್ಮಕ ಒತ್ತಡದ ಬದುಕಿನ ನಡುವೆ ಕತೆ ಹೇಳಲು, ಓದಲು ಸಮಯವೆಲ್ಲಿ? ಮಕ್ಕಳ ಉಸ್ತುವಾರಿ ಮಾಡಲು, ಅವರ ಕುತೂಹಲ ತಣಿಸಲು ಹುಟ್ಟಿಕೊಂಡ ಹೊಸ ಉಪಾಯ ಟಿ.ವಿ, ಕಂಪ್ಯೂಟರ್, ಮೊಬೈಲ್‌ಗಳ ಬಳಕೆ. ಒಂದು ರೀತಿಯಲ್ಲಿ ಖರ್ಚಿಲ್ಲದ ಬೇಬಿ ಸಿಟ್ಟರ್‌ಗಳಿವು. ಆದರೆ ಇವುಗಳ ಅತಿಯಾದ ಬಳಕೆಯಿಂದ ಉಂಟಾದ ಅನೇಕ ದುಷ್ಪರಿಣಾಮಗಳ ಪೈಕಿ ಓದುವ ಪ್ರವೃತ್ತಿಯೇ ಮಾಯವಾಗುತ್ತಿರುವುದು ಒಂದು.

ಮಕ್ಕಳಲ್ಲಿ ಹುಟ್ಟಿನಿಂದ ಎರಡು ವರ್ಷಗಳವರೆಗೆ ಮೆದುಳು ತೀವ್ರವಾಗಿ ಬೆಳೆಯುವುದರಿಂದ ಅದು ಅತ್ಯಂತ ಮಹತ್ವದ ಕಾಲ. ಈ ಎಲ್ಲಾ ಎಲೆಕ್ಟ್ರಾನಿಕ್ ಉಪಕರಣಗಳ ಪ್ರಖರ ಬೆಳಕು, ಬಣ್ಣ, ಚಲಿಸುವ ಚಿತ್ರಗಳು ಆಕರ್ಷಕ ಎನಿಸಿ ಮಕ್ಕಳು ಕಣ್ಣು ಮಿಟುಕಿಸದೇ ನೋಡುವಂತೆ ಮಾಡುತ್ತದೆ ನಿಜ. ಆದರೆ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಇದು ಪೂರಕವಲ್ಲ. ಸುತ್ತಲಿರುವ ಜನರ ಒಡನಾಟ, ಅವರ ನಡೆ–ನುಡಿ ಮಕ್ಕಳ ವ್ಯಕ್ತಿತ್ವಕ್ಕೆ ಅಡಿಪಾಯ. ತನ್ನ ಪ್ರೀತಿಪಾತ್ರರ ಮುಖ ನೋಡುತ್ತಾ, ದನಿ ಕೇಳುತ್ತಾ , ಭಾವನೆಗಳನ್ನು ಗುರುತಿಸುತ್ತಾ ಮಗುವಿನ ಮನಸ್ಸು ವಿಕಾಸಗೊಳ್ಳಬೇಕು. ಸುಮ್ಮನೇ ಟಿ.ವಿ ನೋಡುವುದರಿಂದ ಸಂವಹನಕ್ಕೆ ಯಾವುದೇ ಅವಕಾಶವಿಲ್ಲ. ತಮ್ಮ ಕೆಲಸ ಮಾಡುತ್ತಾ ಪೋಷಕರು ವ್ಯಸ್ತರಾದರೆ ಮಕ್ಕಳು ಉತ್ಸವ ಮೂರ್ತಿಗಳಂತೆ ಸೋಫಾದಲ್ಲಿ ಪ್ರತಿಷ್ಠಾಪನೆಯಾಗುತ್ತಾರೆ. ಮಾತು ಕಿವಿಗೆ ಬೀಳದೇ, ಭಾಷೆ ಕಲಿಯುವುದು ಹೇಗೆ? ಪರಸ್ಪರ ಮಾತು ಕೇಳದೇ, ಮುಖ ಕಾಣದೇ ಸಂಬಂಧ ಬೆಳೆಯುವುದಾದರೂ ಹೇಗೆ?

ಯಂತ್ರಗಳೊಂದಿಗೆ ಬೆಳೆದ ಮಗು ಭಾವನಾತ್ಮಕವಾಗಿ ಬೆಳೆಯುವುದಿಲ್ಲ. ಹಾಗಾಗಿಯೇ ಭಾಷೆಯ ಬಗ್ಗೆ ಆಸಕ್ತಿಯೇ ಇರದ ಇಂದಿನ ಮಕ್ಕಳಲ್ಲಿ ಪುಸ್ತಕ ಓದುವ ಅಭ್ಯಾಸ ಕಡಿಮೆಯಾಗಿರುವುದಂತೂ ಸರಿ. ಜತೆಗೇ ಭಾಷಾ ಕಲಿಕೆ, ಓದುವ ಸಾಮರ್ಥ್ಯ, ಯೋಚನಾ ಶಕ್ತಿ, ನಿದ್ದೆ, ಸೃಜನಶೀಲತೆ ಮತ್ತು ನೆನಪಿನ ಶಕ್ತಿಯೂ ಕುಂಠಿತವಾಗಿರುವುದು ಕಂಡುಬರುತ್ತದೆ. ಭಾಷೆ ಕಲಿಸಲು, ಓದು, ಬರಹದಲ್ಲಿ ಆಸಕ್ತಿ ಮೂಡಿಸಲು ಕತೆ ಹೇಳುವುದು ಮತ್ತು ಕೇಳುವುದು ಅತ್ಯುತ್ತಮ ವಿಧಾನ. ಹಾಗೆಂದು ಮಕ್ಕಳನ್ನು ಈ ಎಲ್ಲಾ ಸಾಧನಗಳಿಂದ ದೂರವಿಡಬೇಕು ಎಂಬುದು ಅಸಾಧ್ಯ ಮತ್ತು ಅನಗತ್ಯ. ಸರಿಯಾಗಿ ಬಳಕೆಯಾದಲ್ಲಿ ಹಲವಾರು ಪ್ರಯೋಜನಗಳೂ ಇವೆ. ಹೊಸ ಪುಸ್ತಕಗಳ ಪರಿಚಯ, ಹೆಚ್ಚಿದ ವಿಶ್ಲೇಷಣಾ ಶಕ್ತಿ, ಇ ಪುಸ್ತಕಗಳು ಹೀಗೆ ಕಲಿಕೆ ಮತ್ತು ಮನರಂಜನೆಯಲ್ಲಿ ಇವು ನೆರವಾಗಲು ಸಾಧ್ಯವಿದೆ. ಆದರೆ ಆರಂಭಿಕ ಕ್ರಿಯಾತ್ಮಕ, ಸೃಜನಾತ್ಮಕ, ಸಾಮಾಜಿಕ ಬೆಳವಣಿಗೆಗೆ ಅದು ಅಡ್ಡಿಯಾಗಬಾರದು.

ಮಕ್ಕಳಿಗೆ ಸಮಯವೇ ಇಲ್ಲ ಎಂಬುದು ಓದುವ ಪ್ರವೃತ್ತಿ ಕಡಿಮೆಯಾಗಿರುವುದಕ್ಕೆ ನೀಡುವ ಇನ್ನೊಂದು ಕಾರಣ. ಸ್ವಲ್ಪ ಮಟ್ಟಿಗೆ ಇದು ನಿಜವೇ! ಮಕ್ಕಳನ್ನು ಸಕಲ ಕಲಾವಲ್ಲಭರನ್ನಾಗಿಸುವ ಪೋಷಕರ ಪ್ರಯತ್ನದಲ್ಲಿ ಯಾರಿಗೂ ಸಮಯವಿಲ್ಲ. ಸ್ಪರ್ಧಾತ್ಮಕ ಬದುಕಿನ ಒತ್ತಡವೂ ಜೋರಾಗಿಯೇ ಇದೆ. ಅಷ್ಟಾಗಿಯೂ ಎಲ್ಲರಿಗೂ ಮೊಬೈಲ್, ಟಿ.ವಿ, ಕಂಪ್ಯೂಟರ್ ಗಳಿಗೆ ಸಮಯವಿದೆ. ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ನೆರವಾಗುವ, ಮನರಂಜನೆಯನ್ನೂ ನೀಡುವ ಓದುವ ಪ್ರವೃತ್ತಿಗೆ ಹೇಗಾದರೂ ಸಮಯ ಕೊಡಲೇಬೇಕು. ಹಾಗೆಯೇ ಶಾಲೆಗೆ ಹೋಗುವ ಮಕ್ಕಳಲ್ಲಿ ಓದಿನ ರುಚಿ ಹತ್ತಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದು. ಇಂದು ಓದು ಎಂದರೆ ಬರೀ ಅಂಕ ಗಳಿಕೆಗೆ ಎನ್ನುವಂತಾಗಿ ಭಾಷಾ ವಿಷಯಗಳ ಪಠ್ಯ ಪುಸ್ತಕಗಳನ್ನೇ ಕೇಳುವವರಿಲ್ಲ. ಹೀಗಿರುವಾಗ ಇನ್ನಿತರ ಪುಸ್ತಕ ಓದಿ ಎಂದು ಹೇಳುವವರು ಯಾರು? ಒಟ್ಟಿನಲ್ಲಿ ಮನೆ, ಶಾಲೆ ಹೀಗೆ ಎಲ್ಲೂ ಮಕ್ಕಳ ಪಠ್ಯೇತರ ಓದಿಗೆ ಪೂರಕ ವಾತಾವರಣವೇ ಇಲ್ಲ. ●